571(1070) ಶ್ರೀ ಆಂಜನೇಯ ಹೆಚ್ (ಭರಮಸಾಗರ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ದೇವದಾಸಿಯರ ಸಂಖ್ಯೆ ಎಷ್ಟು ಇವರಿಗೆ ಯಾವ ಯಾವ ಸೌಲಭ್ಯಗಳನ್ನು ನೀಡಲಾಗಿದೆ?

ಆ) ಇವರ ಅಭಿವೃದ್ಧಿಗಾಗಿ 2005–06ನೇ ಸಾಲಿನಲ್ಲಿನ ಎಷ್ಟು ಹಣ ಆಯವ್ಯಯದಲ್ಲಿ ಮೀಸಲಿಡಲಾದ ಹಣ ಎಷ್ಟು ಹಾಗೂ ಇದುವರೆವಿಗೂ ಖರ್ಚಾದ ಹಣ ಎಷ್ಟು?

ಇ) ಹಾಗಿದ್ದಲ್ಲಿ ಮಾಸಾಶನ ನೀಡಲು ಸರ್ಕಾರ ಕ್ರಮ ಕೈಗೊಂಡಿದೆಯೇ, ಹಾಗಿದ್ದಲ್ಲಿ ಇವರಿಗೆ ಮಾಹೆಯಾನ ನೀಡಲಾಗಿರುವ ಮಾಶಾಸನ ಎಷ್ಟು?

ಶ್ರೀ ಹೆಚ್ ಕೆ ಕುಮಾರಸ್ವಾಮಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ಕರ್ನಾಟಕ ರಾಜ್ಯದಲ್ಲಿರುವ ದೇವದಾಸಿಗಳ ಬಗ್ಗೆ 1993–94ನೇ ಸಾಲಿನಲ್ಲಿ ನಡೆಸಿದ ಸಮೀಕ್ಷೆಯಂತೆ ಒಟ್ಟು 22873 ದೇವದಾಸಿಯರು ಇರುತ್ತಾರೆ ದೇವದಾಸಿಯರಿಗಾಗಿ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ

1 ದೇವದಾಸಿ ಮಹಿಳೆಯರ ಪುನರ್‌ವಸತಿಗಾಗಿ ಆದಾಯ ಉತ್ಪನ್ನಕರ ಚಟುವಟಿಕೆಗಳಲ್ಲಿ ತೊಡಗಲು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ ರೂ 9,000/–ಗಳ ಸಹಾಯಧನ ಮತ್ತು ರೂ 6,000/–ಗಳ ಸಾಲ ಧನವಾಗಿ ಇದುವರೆಗೆ 9,142 ದೇವದಾಸಿ ಮಹಿಳೆಯರಿಗೆ ಆರ್ಥಿಕ ಸವಲತ್ತು ನೀಡಲಾಗಿದೆ

2 ದೇವದಾಸಿಯರ ಆರೋಗ್ಯದ ದೃಷ್ಟಿಯಿಂದ ತಿಂಗಳಿಗೊಮ್ಮೆ ಸರ್ಕಾರಿ ಆಸ್ಪತ್ರೆ ವೈದ್ಯರಿಂದ ಆಯಾಯ ತಾಲ್ಲೂಕುಗಳಲ್ಲಿ ಆರೋಗ್ಯ ತಪಾಸಣೆ ನಡೆಸಿ ಔಷಧ ಉಪಚಾರಗಳನ್ನು ನೀಡಲಾಗುತ್ತಿದೆ

3 ದೇವದಾಸಿ ಪದ್ಧತಿಯನ್ನು ಸರ್ಕಾರ 1982ರಲ್ಲಿ ದೇವದಾಸಿ ಸಮರ್ಪಣೆ ನಿಷೇಧ ಕಾಯ್ದೆಯನ್ನು ಜಾರಿಗೆ ತಂದಿದೆ ದೇವದಾಸಿ ಪದ್ಧತಿಯನ್ನು ಪ್ರೇರೇಪಿಸುವ ಮತ್ತು ಅನುಸರಿಸುವ ವ್ಯಕ್ತಿಗಳಿಗೆ ರೂ 5,000/– ಜುಲ್ಮಾನೆ ಮತ್ತು 5 ವರ್ಷ ಶಿಕ್ಷೆ ವಿಧಿಸಲು ಅವಕಾಶವಿರುತ್ತದೆ

4 ದೇವದಾಸಿ ಪದ್ಧತಿಯನ್ನು ಪೂರ್ಣವಾಗಿ ತಡೆಗಟ್ಟಲು ಜನಜಾಗೃತಿ ಕಾರ್ಯಕ್ರಮ ಹಾಗೂ ಜಾತ್ರೆ, ಉತ್ಸವಗಳಲ್ಲಿ ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ

5 ದೇವದಾಸಿಯವರು ಹೊಂದಿರುವ ನಿವೇಶನವನ್ನು ಪರಿಶೀಲಿಸಿ ಈ ವರ್ಷ 15,000 ಮನೆಗಳನ್ನು ನಿರ್ಮಾಣ ಮಾಡಲು ತೀರ್ಮಾನಿಸಿದ್ದು, ಇದುವರೆಗೆ 10,634 ದೇವದಾಸಿ ಮಹಿಳೆಯರು ನಿವೇಶನ ಹೊಂದಿದ್ದು, ಇವರುಗಳಿಗೆ ಮನೆ ನಿರ್ಮಾಣ ಮಾಡಲು ಕರ್ನಾಟಕ ಗೃಹ ಮಂಡಳಿಯಿಂದ ಕ್ರಮ ಕೈಗೊಳ್ಳಲಾಗಿದೆ

ಆ) 2005–06ನೇ ಸಾಲಿನಲ್ಲಿ ದೇವದಾಸಿಯರ ಅಭಿವೃದ್ಧಿಗಾಗಿ ಆಯವ್ಯಯದಲ್ಲಿ ಕಾದಿರಿಸಿದ್ದ ಹಣ ರೂ 80 00 ಲಕ್ಷ ಖರ್ಚು ಮಾಡಿರುವ ಹಣ ರೂ 129 76 ಲಕ್ಷ

ಇ) ಪರಿಶೀಲನೆಯಲ್ಲಿದೆ

572(1071) ಶ್ರೀ ಆಂಜನೇಯ ಹೆಚ್. (ಭರಮಸಾಗರ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದ ಯಾವ ಯಾವ ಇಲಾಖೆಗಳಲ್ಲಿ ಯಾವ ಯಾವ ವೃಂದದ ಬ್ಯಾಕ್‌ಲಾಗ್ ಹುದ್ದೆಗಳು ಖಾಲಿ ಇವೆ?

ಆ) ಈವರೆವಿಗೂ ಎಷ್ಟು ಹುದ್ದೆಗಳನ್ನು ಭರ್ತಿ ಮಾಡಲಾಗಿದೆ?

ಇ) ಇನ್ನೂ ಭರ್ತಿ ಮಾಡಬೇಕಾಗಿರುವ ಹುದ್ದೆಗಳು ಎಷ್ಟು, ಯಾವಾಗ ಭರ್ತಿ ಮಾಡಲಾಗುವುದು?

ಈ) ಹಾಗಿದ್ದಲ್ಲಿ, ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡದಿರುವ ಇಲಾಖೆಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮವೇನು (ಪೂರ್ಣ ವಿವರ ಒದಗಿಸುವುದು)?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು):

ಅ) ಸರ್ಕಾರದ ಕೆಳಕಂಡ ಇಲಾಖೆಗಳಲ್ಲಿ 13 ಹುದ್ದೆಗಳು ಖಾಲಿ ಇದ್ದು ಭರ್ತಿ ಮಾಡಬೇಕಾಗಿರುತ್ತದೆ